R.A.No.59/2011
R.W.1.

**ಸಾಕ್ಷಿಯನ್ನು ದಿಃ 18.02.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎಂ ಬಿ ಪಿ ವಕೀಲರಿಂದ**

ನಾನು ಈ ಪ್ರಕರಣದಲ್ಲಿ ನಾನು ಅರ್ಜಿದಾರ-ಉದ್ದೇಶಿತ ಎದುರುದಾರ ನಂ.7 ಎ (Proposed R7-A) ಆಗಿದ್ದು, ಸಿ.ಪಿ.ಸಿ. ಆದೇಶ 22 ನಿಯಮ-5 ರಡಿಯಲ್ಲಿ ವಿಚಾರಣೆಗಾಗಿ ನನ್ನ ಮುಖ್ಯ ವಿಚಾರಣೆಯ ಅಂಗವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಎಲ್ಲಾ ಸತ್ಯವಾಗಿದೆ. ಅದಕ್ಕೆ ಸಹಿ ಮಾಡಿದ್ದು ಇರುತ್ತದೆ.

ನನ್ನ ಅಜ್ಜಿ ಭಾಗೀರಥಿ ರವರು ನನ್ನ ಪರವಾಗಿ ವಿಲ್ ಬರೆದುಕೊಟ್ಟಿದ್ದು ಇರುತ್ತದೆ. ಸದರಿ ಮೂಲ ವಿಲ್ ಪ್ರಧಾನ ಸಿವಿಲ್ ನ್ಯಾಯಾಲಯ ಮುಧೋಳದಲ್ಲಿ ಅಸಲು ದಾವೆ ನಂ.147/2010 ಪ್ರಕರಣದಲ್ಲಿ ಇದ್ದು, ಈಗ ನನ್ನ ಮಧ್ಯಂತರ ಅರ್ಜಿ-8 ರ ಮೇಲಿನ ವಿಚಾರಣೆಗಾಗಿ ವಿಲ್ ನ ಯಥಾಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಸದರಿ ವಿಲ್ ನ್ನು ಮೇಲ್ಮವಿದಾರರ ವಕೀಲರ ಆಕ್ಷೇಪಣೆಗೆ ಒಳಪಟ್ಟು ನಿ.ಆರ್.1 ಎಂದು ಗುರ್ತಿಸಲಾಯಿತು. ಆರ್ ಟಿ ಸಿ ನಿ.ಆರ್.2, ಅಸಲು ದಾವೆ ನಂ.147/2010 ಪ್ರಕರಣದಲ್ಲಿನ ಮಧ್ಯಂತರ ಅರ್ಜಿ-2 ರ ಮೇಲಿನ ಆದೇಶದ ಪ್ರತಿ ನಿ.ಆರ್.3 ಎಂದು ಗುರ್ತಿಸಲಾಯಿತು.

ನನ್ನನ್ನು ಈ ಪ್ರಕರಣದಲ್ಲಿ ಉದ್ದೇಶಿತ ಎದುರುದಾರನನ್ನಾಗಿ ಸೇರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಮೇಲ್ಮನವಿದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.21 12:42:33 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ